# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ-583105

ಕುಲಸಚಿವರು　　ದೂರವಾಣಿ:08392-242703　　ಫ್ಯಾಕ್ಸ್ :08392-242907


ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಅ.ಉ-ನೇಮಕಾತಿ/2019-20/1352　　ದಿನಾಂಕ: 26-08-19

## ಆದೇಶ

ವಿಷಯ: 2019-20ನೇ ಶೈಕ್ಷಣಿಕ ಸಾಲಿನ ಪೂರ್ಣಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.08.2019.

***

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, 2019-20ನೇ ಸಾಲಿಗಾಗಿ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ ಮೊದಲನೇ ಮತ್ತು ಮೂರನೇ ಚಾತುರ್ಮಾಸದ ತರಗತಿಗಳಿಗೆ ಈ ಕೆಳಕಂಡ ಅತಿಥಿ ಉಪನ್ಯಾಸಕರನ್ನು ದಿನಾಂಕ:23.08.2019ರಿಂದ ಸೆಮಿಸ್ಟೆ ಅಂತ್ಯದವರೆಗೆ ಬೋಧನಾ ಕಾರ್ಯ ನಿರ್ವಹಿಸಲು ಪೂರ್ಣಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಲಾಗಿದ್ದು ವಿವರಗಳು ಈ ಕೆಳಗಿನಂತಿವೆ.

| **Mineral Processing** | | | |
|---|---|---|---|
| **PG Centre, Nandihalli (06 Part Time)** | | | |
| 01 | Kavitha Ravikumar | OBC | PartTime-10Hours |
| 02 | Pramod Kumar N M | GM | PartTime-06Hours |
| 03 | Dr. Shashidhar S M | GM | Part Time 08Hours |
| 04 | Venkatesh M | ST | PartTime07Hours (OnlyI Sem) |
| 05 | Basavaraj G H | OBC | Part Time 04Hours |
| 06 | Keerthi V H M | OBC | Part Time 08 Hours |

| **M.S.W** | | | |
|---|---|---|---|
| **PG Centre, Nandihalli (02 Full Time 01Part Time) Permanent Faculty in Maternity Leave** | | | |
| 01 | Lakshman Toli | Cat-I | NET/ SLET -Full Time |
| 02 | Karibasamma N | ST(W) | SLET-Full Time |
| 03 | Mallappa B G | OBC | Part Time |
| | | | |
| **PG Centre, Koppal (03 Full Time and 01 Part Time)** | | | |
| 01 | Vinayaka A | OBC | NET-Full Time |
| 02 | Yerriswamy V | SC | NET-Full Time |
| 03 | Suresh Naik R | SC | NET-Full Time |
| 04 | Shreekant | OBC | NET-Part Time |

ಷರತ್ತುಗಳು:

**ಮೇಲ್ಕಂಡ ಅನುಮತಿಯನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲಾಗಿದೆ:**

01. ಪೂರ್ಣಕಾಲಿಕ ಉಪನ್ಯಾಸಕರ ನೇಮಕಾತಿ ಪಟ್ಟಿಯನ್ನು ಆಯಾ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸುತ್ತಿದ್ದು, ಆಯಾ ವಿಭಾಗದ ಮುಖ್ಯಸ್ಥರು ನೇಮಕಗೊಂಡ ಉಪನ್ಯಾಸಕರನ್ನು ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ ಮತ್ತು ಯಲಬುರ್ಗಾಕ್ಕೆ ನಿಯೋಜನೆಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ.
02. ಸದರಿ ಅತಿಥಿ ಉಪನ್ಯಾಸಕರ ಆಹ್ವಾನವು ಅವರ ಕೆಲಸಕ್ಕೆ ಹಾಜರಾದ ದಿನದಿಂದ 2019-20ನೇ ಸಾಲಿನ ಮೊದಲನೇ ಮತ್ತು ಮೂರನೇ ಚತುರ್ಮಾಸದ ತರಗತಿಗಳ ಕೊನೆಯ ದಿನಾಂಕದವರೆಗೆ ಮಾತ್ರ ಊರ್ಜಿತವಾಗಿರುತ್ತದೆ.
03. ಯಾವುದೇ ಪೂರ್ವ ಸೂಚನೆಯಿಲ್ಲದೆ ಈ ಆಹ್ವಾನವನ್ನು ರದ್ದುಪಡಿಸುವ ಹಕ್ಕು ವಿಶ್ವವಿದ್ಯಾಲಯಕ್ಕಿದೆ.

04. ಅತಿಥಿ ಉಪನ್ಯಾಸಕರು NET/SLET/Ph.D., ಪದವಿ ಹೊಂದಿದ್ದು, ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ನಿಗಧಿಪಡಿಸಿರುವ ವಿದ್ಯಾರ್ಹತೆ ಹೊಂದಿದ್ದು, ಸಹಾಯ ಪ್ರಾಧ್ಯಾಪಕ ಹುದ್ದೆಗೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಎರಡೂ ಸೇರಿದ್ದಲ್ಲಿ ವಾರಕ್ಕೆ ಪ್ರಾಯೋಗಿಕ ತರಗತಿಗಳಿದ್ದಲ್ಲಿ 20 ಘಂಟೆ ಇಲ್ಲದಿದ್ದಲ್ಲಿ 16ಗಂಟೆ ಬೋಧನೆಯಲ್ಲಿ ತೊಡಗಿಕೊಂಡರೆ, ಪ್ರತಿ ತಿಂಗಳು ಸಂಚಿತ ಗೌರವಧನ ರೂ.20,000/-ಕ್ಕೆ ಅರ್ಹರಾಗಿರುತ್ತಾರೆ. ಅತಿಥಿ ಉಪನ್ಯಾಸಕರು ಮೇಲೆ ಹೇಳಿದ ಅವಧಿಯಷ್ಟೇ ಕಾರ್ಯ ನಿರ್ವಹಿಸುತ್ತಿದ್ದು NET/SLET/Ph.D., ಪದವಿ ಹೊಂದಿಲ್ಲದಿದ್ದಲ್ಲಿ ಮಾಸಿಕ ಸಂಚಿತ ಗೌರವ ಧನ ರೂ.15,000/-ಕ್ಕೆ ಅರ್ಹರಾಗಿರುತ್ತಾರೆ. ವಾರಕ್ಕೆ 16 ಘಂಟೆಗಳಿಗಿಂತ ಕಡಿಮೆ ಬೋಧನೆ ನಡೆಸುವ ಅತಿಥಿ ಉಪನ್ಯಾಸಕರು ಪ್ರತಿ ಘಂಟೆಯ ಬೋಧನೆಗೆ ರೂ.350/-ರಂತೆ ಆದರೆ ಮಾಸಿಕ ಗರಿಷ್ಟ ಮಿತಿ ರೂ.10,000/- ಮೀರದಂತೆ ಗೌರವಧನ ಪಡೆಯಲು ಅರ್ಹರಾಗುತ್ತಾರೆ. ಅತಿಥಿ ಸಹಾಯಕ ಗ್ರಂಥಪಾಲಕರು ಮತ್ತು ಅತಿಥಿ ದೈಹಿಕ ತರಬೇತಿದಾರರು ಆಯಾ ವಿಭಾಗಗಳಲ್ಲಿ ಪೂರ್ಣಾವಧಿಯಾಗಿ ಕೆಲಸ ನಿರ್ವಹಿಸತಕ್ಕದ್ದು.

05. ಭಾನುವಾರ ಮತ್ತು ಇತರೆ ಸರಕಾರಿ ರಜಾ ದಿನಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಿನ ಕೆಲಸಕ್ಕೆ ಹಾಜರಾಗದಿದ್ದಲ್ಲಿ ಸಂಚಿತ ಗೌರವ ಧನದಲ್ಲಿ ಪ್ರಮಾಣವಾರು ಕಡಿತ ಮಾಡಲಾಗುವುದು.

06. ಅತಿಥಿ ಉಪನ್ಯಾಸಕರ ಗೌರವ ಧನ ಪಾವತಿಗಾಗಿ ಹುಂಡಿಗಳನ್ನು ಕಳುಹಿಸುವಾಗ ಅವರು ನಿರ್ದಿಷ್ಟ ಅವಧಿಯಲ್ಲಿ ಬೋಧನಾ ಕಾರ್ಯ ನಿರ್ವಹಿಸಿದ ಅವಧಿಯನ್ನು ಮಾತ್ರ ಪರಿಗಣಿಸಲಾಗುವುದು.

07. ಸದರಿ ಆಹ್ವಾನವು ವಿಶ್ವವಿದ್ಯಾಲಯದ ತತ್‌ಕ್ಷಣದ ಕಾರ್ಯಭಾರವನ್ನು ನಿರ್ವಹಿಸಲು ತಾತ್ಕಾಲಿಕ ವ್ಯವಸ್ಥೆಯಾಗಿದ್ದು ವಿಶ್ವವಿದ್ಯಾಲಯದ ಯಾವುದೇ ನೇಮಕಾತಿಯಲ್ಲ.

08. ಪೂರ್ಣಾವಧಿ ಕಾರ್ಯ ನಿರ್ವಹಿಸುವ ಅತಿಥಿ ಉಪನ್ಯಾಸಕರು ಎಲ್ಲ ಕೆಲಸದ ದಿನಗಳಲ್ಲಿ ಆಯಾ ವಿಭಾಗದ ವೇಳಾಪಟ್ಟಿಯಂತೆ ಕನಿಷ್ಠ 06 ಘಂಟೆಗಳ ಕಾಲ ವಿಭಾಗದಲ್ಲಿ ಲಭ್ಯವಿರಬೇಕು.

09. ಅತಿಥಿ ಉಪನ್ಯಾಸಕರು ಕೇಂದ್ರ ನಿರ್ದೇಶಕರು/ವಿಭಾಗದ ಅಧ್ಯಕ್ಷರು/ಸಂಯೋಜಕರು ವಹಿಸುವ ಕೇಂದ್ರ/ವಿಭಾಗದ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಕೆಲಸಗಳನ್ನು ನಿರ್ವಹಿಸಬೇಕು.

10. ಆಯಾ ವಿಭಾಗದ ಅಧ್ಯಕ್ಷರು/ಸಂಯೋಜನಕರು/ಕೇಂದ್ರದ ನಿರ್ದೇಶಕರು ಅನುಮೋದಿಸಿ ಕಳುಹಿಸಿದ ಹಾಜರಾತಿ ಪ್ರಮಾಣ ಪತ್ರದ ಅನುಸಾರ ಗೌರವಧನ ಪಾವತಿಸಲಾಗುವುದು.

11. ಎಲ್ಲಾ ಅತಿಥಿ ಉಪನ್ಯಾಸಕರು ಕೆಲಸದ ಮೇಲೆ ವರದಿ ಮಾಡಿಕೊಳ್ಳುವಾಗಿ ನಿಗಧಿತ ಮುಚ್ಚಳಿಕೆ ಬರೆದು ಕೊಡಬೇಕು.

12. ಎಲ್ಲಾ ಅತಿಥಿ ಉಪನ್ಯಾಸಕರುಗಳು ಕೆಲಸಕ್ಕೆ ವರದಿ ಮಾಡಿಕೊಳ್ಳುವ ಸಮಯದಲ್ಲಿ ಈ ಕೆಳಕಂಡ ಮುಚ್ಚಳಿಕೆ ಪತ್ರವನ್ನು ಆಯಾ ವಿಭಾಗ/ಘಟಕದ ಮುಖ್ಯಸ್ಥರು/ಸಂಯೋಜಕರುಗಳಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

26/08/19

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಗೆ,
ಮೇಲ್ಕಾಣಿಸಿದ ಎಲ್ಲಾ ವಿಭಾಗಗಳು

ಪ್ರತಿಗಳು:

11. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ.
12. ನಿರ್ದೇಶಕರು/ವಿಶೇಷಾಧಿಕಾರಿಗಳು, ಸ್ನಾತಕೋತ್ತರಕೇಂದ್ರ, ನಂದಿಹಳ್ಳಿ, ಕೊಪ್ಪಳ/ಯಲಬುರ್ಗಾ, ಇವರ ಮಾಹಿತಿಗಾಗಿ.
13. ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
14. ಮುಖ್ಯಸ್ಥರು/ ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ-ರವರಿಗೆ ಮಾಹಿತಿಗಾಗಿ
15. ಕಛೇರಿ ಪ್ರತಿ.

# : ಮುಚ್ಚಳಿಕೆ ಪತ್ರ :

ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ವಿಶ್ವವಿದ್ಯಾಲಯವು 2019–20ನೇ ಶೈಕ್ಷಣಿಕ ವರ್ಷದ ಮೊದಲ/ತೃತೀಯ/ಪಂಚಮ ಸೆಮಿಸ್ಟರ್‌ಗಳಿಗೆ ಅತಿಥಿ ಉಪನ್ಯಾಸಕ್ಕಾಗಿ ಅಥವಾ ಮುಂದಿನ ಆದೇಶದವರಗೆ, ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಪೂರ್ಣಾವಧಿ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಲು ನನ್ನನ್ನು ಆಹ್ವಾನಿಸಿರುವುದು. ತಾತ್ಕಾಲಿಕವಾಗಿರುತ್ತದೆ ಎಂದು ಭಾವಿಸಿರುತ್ತೇನೆ. ನಾನು ವಾರದ ಎಲ್ಲಾ ಕೆಲಸದ ದಿನಗಳಲ್ಲಿ ವಿಭಾಗದಲ್ಲಿ ಹಾಜರಿದ್ದು, ವಿಶ್ವವಿದ್ಯಾಲಯದ ಆದೇಶದಲ್ಲಿನ ಎಲ್ಲಾ ನಿಬಂಧನೆಗಳಿಗೆ ಅನುಸಾರ ಕೆಲಸ ನಿರ್ವಹಿಸುತ್ತೇನೆ. ಸದರಿ ಕೆಲಸದ ಹೊರತಾಗಿ ಬೇರೆ ಯಾವುದೇ ಸಂಸ್ಥೆಗಳಲ್ಲಿ ನಾನು ಉದ್ಯೋಗ/ವ್ಯಾಸಂಗದಲ್ಲಿ ತೊಡಗಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸುತ್ತೇನೆ. ಒಂದು ವೇಳೆ ತಪ್ಪಿದಲ್ಲಿ ಯಾವುದೇ ಮುನ್ಸೂಚನೇ ನೀಡದೇ ನನಗೆ ನೀಡಿದ ಆದೇಶವನ್ನು ವಿಶ್ವವಿದ್ಯಾಲಯ ಹಿಂಪಡೆಯಬಹುದಾಗಿದೆ ಎಂದು ಈ ಮೂಲಕ ಸ್ಪಷ್ಟಪಡಿಸುತ್ತಿದ್ದೇನೆ.

ತಮ್ಮ ವಿಶ್ವಾಸಿ.

ಅತಿಥಿ ಉಪನ್ಯಾಸಕರ ಹೆಸರು.

ವಿಭಾಗ :

ವಿಳಾಸ :